ದಿಃ 13.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಎಸ್.ಬಿ. ವಕೀಲರಿಂದ ,**

1. ನಾನು ಕೋಆಪರೇಟಿವ್ ಬ್ಯಾಂಕ್ ನಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿರುತ್ತೇನೆ ಹಾಗೂ ನಾನು ವ್ಯವಸಾಯ ಸಹ ಮಾಡುತ್ತಿರುತ್ತೇನೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನಗೆ ಮಾಸಿಕ ರೂ. 15,000/- ವೇತನ ಇದ್ದು, ವ್ಯವಸಾಯದಿಂದ ನನಗೆ ವಾರ್ಷಿಕ ರೂ. 6 – 7 ಲಕ್ಷ ಆದಾಯ ಇರುತ್ತದೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

2. ಆರೋಪಿ ನನಗೆ 8 – 10 ವರ್ಷಗಳಿಂದ ಪರಿಚಯ. ಸಾಲ ನೀಡುವ ಸುಮಾರು 15 ದಿನಗಳ ಮುಂಚಿತವಾಗಿ ಆರೋಪಿ ನನ್ನ ಬಳಿ ಹಣ ಕೇಳಿದ್ದರು. ನಾನು ಆರೋಪಿಗೆ ದಿಃ 22-05-2025 ರಂದು ಹಣ ನೀಡಿರುತ್ತೇನೆ. ಆರೋಪಿ ತನ್ನ ಮನೆ ಖರೀದಿಸಿದ ಸಂಬಂಧ ಆಗಿದ್ದ ಸಾಲ ತೀರುವಳಿಗಾಗಿ ನನ್ನ ಬಳಿ ಸಾಲ ಪಡೆದಿರುತ್ತಾರೆ. ನಾನು ಆರೋಪಿಗೆ ಹಣವನ್ನು ನಗದಾಗಿ ನೀಡಿರುತ್ತೇನೆ. ಆರೋಪಿ ನಮ್ಮ ಮನೆಗೆ ಬಂದು ನನ್ನಿಂದ ಹಣ ಪಡೆದಿರುತ್ತಾರೆ. ಆ ಸಮಯ ಆರೋಪಿಯೊಂದಿಗೆ ಆತನ ಗೆಳೆಯ ಸಹ ಇದ್ದರು, ಆತನ ಹೆಸರು ನನಗೆ ತಿಳಿದಿಲ್ಲ. ಆ ಸಮಯ ಆರೋಪಿ ನನಗೆ ನಿಪಿ - 1 ಚೆಕ್ಕನ್ನು ನೀಡಿದ್ದು ನಾನು ಆರೋಪಿಯಿಂದ ಬೇರೆ ದಾಖಲೆ ಪಡೆದುಕೊಂಡಿರುವುದಿಲ್ಲ. ಈ ವ್ಯವಹಾರ ಹೊರತು ಪಡಿಸಿ ನನ್ನ ಹಾಗೂ ಆರೋಪಿ ನಡುವೆ ಬೇರಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ಆರೋಪಿಗೆ ಹಣ ನೀಡುವ ಸಲುವಾಗಿ ನಾನು ರೂ. 2,50,000/- ಗಳನ್ನು ನನ್ನ ಬ್ಯಾಂಕ್ ಖಾತೆಯಿಂದ ತೆಗೆದಿದ್ದು, ಉಳಿದ ಹಣ ನನ್ನ ಮನೆಯಲ್ಲಿ ಇತ್ತು. ನಾನು ನಿಖರವಾಗಿ ಯಾವ ದಿನಾಂಕ ಬ್ಯಾಂಕ್ ನಿಂದ ಹಣ ತೆಗೆದಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆ ಸಂಬಂಧ ದಾಖಲೆ ಹಾಜರು

ಪಡಿಸಬಲ್ಲೆ. ನಾನು ಆರೋಪಿಗೆ ರೂ. 4,00,000/- ಗಳನ್ನು ಸಾಲವಾಗಿ ನೀಡಿರುತ್ತೇನೆ.

3. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿರುವುದಿಲ್ಲ. ನಾನು ಆರೋಪಿಗೆ ಏಕಕಂತಿನಲ್ಲಿ ಸದರಿ ಹಣ ನೀಡಿರುತ್ತೇನೆ. ನಾನು ಆರೋಪಿಗೆ ರೂ. 500/- ಮುಖಬೆಲೆಯ ನೋಟುಗಳಲ್ಲಿ ಹಣ ನೀಡಿರುತ್ತೇನೆ. ಆರೋಪಿ ಶಿವಮೊಗ್ಗದ ಎಸ್.ಬಿ.ಐ. ಬ್ಯಾಂಕ್ ನ ಚೆಕ್ಕನ್ನು ನನಗೆ ನೀಡಿರುತ್ತಾರೆ. ಸದರಿ ಚೆಕ್ಕು ಸಂಖ್ಯೆ 352003 ಆಗಿರುತ್ತದೆ. ಆರೋಪಿ ದಿಃ 16-07-2025 ಎಂದು ನಮೂದಿಸಿ ರೂ. 4,00,000/- ಗಳಿಗೆ ನನಗೆ ಚೆಕ್ಕನ್ನು ನೀಡಿರುತ್ತಾರೆ.

4. ಆರೋಪಿಯ ಅಜ್ಜಿ ಅನ್ನಪೂರ್ಣಮ್ಮ ನನಗೆ ತಿಳಿದಿರುತ್ತಾರೆ ಎಂದರೆ ಸರಿಯಲ್ಲ. ಆಕೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ನನ್ನ ಹಾಗೂ ಆಕೆಯ ನಡುವೆ ಹಣಕಾಸಿನ ವ್ಯವಹಾರ ಇರುತ್ತದೆ ಎಂದರೆ ಸರಿಯಲ್ಲ. 2017 ನೇ ಸಾಲಿನಲ್ಲಿ ನಾನು ಆಕೆಗೆ ರೂ. 2,00,000/- ಗಳನ್ನು ಸಾಲವಾಗಿ ನೀಡಿದ್ದೆನು ಎಂದರೆ ಸರಿಯಲ್ಲ. ಆ ಸಮಯ ಸದರಿ ಹಣದ ಭದ್ರತೆಗಾಗಿ ನಾನು ಆರೋಪಿಯಿಂದ ನಿಪಿ - 1 ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕಿನ ದುರುಪಯೋಗಪಡಿಸಿಕೊಂಡು ನಾನು ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ದಿಃ 10-08-2025 ರಂದು ನಿಪಿ - 1 ಚೆಕ್ಕನ್ನು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಹಾಕಿರುತ್ತೇನೆ. ಆ ದಿವಸ ಭಾನುವಾರವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ದಿಃ 12-08-2025 ರಂದು ನಾನು ಹಿಂಬರಹ ಪಡೆದಿರುತ್ತೇನೆ. ನಿಪಿ - 1 ರಲ್ಲಿನ ಬರವಣಿಗೆ ಹಾಗೂ ಸಹಿ ಬೇರೆ ಬೇರೆ

ಶಾಹಿಯಲ್ಲಿ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಟಿ.ಶ್ರೀಕಾಂತ್**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**